**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 18 ಗ್ರಾನೀಸ(4)2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 19.7.2013

**ಸುತ್ತೋಲೆ**

ವಿಷಯ: ಟಾಸ್ಕ್ ಫೋರ್ಸ್ ಸಮಿತಿಗಳ ಮುಖೇನ ಗ್ರಾಮೀಣ ಪ್ರದೇಶಗಳಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 131 ಗ್ರಾನೀಸ(4)02, ದಿ:12.01.2005.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 26 ಗ್ರಾನೀಸ(2)05, ದಿ:25.01.2005.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 87 ಗ್ರಾನೀಸ(2)04, ದಿ:01.04.2005.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 131 ಗ್ರಾನೀಸ(4)04, ದಿ:03.03.2005.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 131 ಗ್ರಾನೀಸ(4)04, ದಿ:03.03.2005.
6. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 131 ಗ್ರಾನೀಸ(4)04, ದಿ:03.03.2005.
7. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 110 ಗ್ರಾನೀಸ(4)12, ದಿ:05.07.2012.
8. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 18 ಗ್ರಾನೀಸ(4)13, ದಿ.16.02.2013.
9. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 18 ಗ್ರಾನೀಸ(4)13, ದಿ.02.04.2013
10. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 18 ಗ್ರಾನೀಸ(4)13, ದಿ.12.06.2013.

---

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರಿನ ಪೂರೈಕೆ ಮಾಡಲು ಎಲ್ಲಾ ಜನವಸತಿಗಳಿಗೂ ಕನಿಷ್ಟ ಒಂದಕ್ಕಿಂತ ಹೆಚ್ಚು ಕುಡಿಯುವ ನೀರಿನ ಜಲಮೂಲ/ ಸೌಲಭ್ಯಗಳನ್ನು ಒದಗಿಸಲಾಗಿದೆ. ಆದಾಗ್ಯೂ ಅಂತರ್ಜಲ ಕುಸಿತದಿಂದ ಮತ್ತು ನೀರಿನ ಗುಣಮಟ್ಟದ ಸಮಸ್ಯೆಯಿಂದ ಅಗತ್ಯವಿರುವ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಬೇಸಿಗೆ ಬರದ ಹಿನ್ನೆಲೆಯಲ್ಲಿ ಕೈಗೊಂಡಿರುವ ಮತ್ತು ಕೈಗೊಳ್ಳಬೇಕಾಗಿರುವ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಸಂಬಂಧ ಬಜೆಟ್ ಅಧಿವೇಶನದ ಚರ್ಚೆಯ ಸಂದರ್ಭದಲ್ಲಿ ಹಲವಾರು ಸಲಹೆ/ಸೂಚನೆಗಳು ವ್ಯಕ್ತವಾಗಿವೆ.

2. ಈ ಸನ್ನಿವೇಶದಲ್ಲಿ, ಉಲ್ಲೇಖಿತ ಸುತ್ತೋಲೆ / ಆದೇಶಗಳ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿರುವ ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಭೆಯನ್ನು **ಪ್ರತಿ ತಿಂಗಳು 5ನೇ** ತಾರೀಖಿನಂದು ಕೆಳಕಂಡ ಅಧಿಕಾರಿನ್ನೊಳಗೊಂಡಂತೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಕರೆಯಲು ನಿರ್ದೇಶಿಸಿದೆ. (i) ಆಯಾ ತಾಲ್ಲೂಕಿನ ತಹಶೀಲ್ದಾರ್, (ii) PREDಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್, (iii) ಭೂವಿಜ್ಞಾನಿ, (iv) ಸಂಬಂಧಿಸಿದ ESCOMನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮತ್ತು (v) ಜಿಲ್ಲಾ ಪಂಚಾಯತ್‌ನಲ್ಲಿರುವ ಒಬ್ಬರು ಯೋಜನಾಧಿಕಾರಿ.

3. ಸದರಿ ಸಭೆಯಲ್ಲಿ ಕೆಳಕಂಡ ವಿಷಯಗಳನ್ನು ಕುರಿತು. ಪರಿವೀಕ್ಷಣೆ / ಪರಾಮರ್ಶೆ ಮಾಡಬೇಕು.

(i) ಹಿಂದಿನ ಸಭೆಯ ನಡವಳಿಗಳ ಮೇಲಿನ ಅನುಪಾಲನಾ ಕ್ರಮ, (ii) ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುವ ಕುಡಿಯುವ ನೀರು ಸರಬರಾಜು ಯೋಜನೆಗಳ ವಿದ್ಯುದ್ಧೀಕರಣ, (iii) ಕೊಳವೆ ಬಾವಿಗಳ ದುರಸ್ತಿ ಮತ್ತು ನಿರ್ವಹಣೆ ಹಾಗೂ ಪುನಃಶ್ಚೇತನ (ಅಂತರ್ಜಲ ಮರುಪೂರಣ ಮತ್ತು ಹೈಡ್ರೋಫ್ರಾಕ್ಚರಿಂಗ್ ಸೇರಿದಂತೆ) ಕಾಮಗಾರಿಗಳ ಪ್ರಗತಿ, (iv) ವಾಸ್ತವಿಕವಾಗಿ ಹೊಸ ಕೊಳವೆ ಬಾವಿ ಕೊರೆಯುವ ಅನಿವಾರ್ಯತೆ, (v) ಕುಡಿಯುವ ನೀರಿಗಾಗಿ ಖಾಸಗಿ ಕೊಳವೆ ಬಾವಿಗಳ ಸೇವೆ ಪಡೆಯುವುದು, (vi) ಕುಡಿಯುವ ನೀರಿನ ಯೋಜನೆಗಳ ಪ್ರಗತಿ ಪರಿಶೀಲನೆ ಹಾಗೂ ಸಾರ್ವಜನಿಕ ದೂರುಗಳ ವಿಲೇವಾರಿ.

..2

4. ಈ ಹಿನ್ನೆಲೆಯಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಅಗತ್ಯತೆ/ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಳ್ಳಬೇಕಾಗಿರುವ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕಾರ್ಯಗತಗೊಳಿಸುವ ಸಲುವಾಗಿ ಚಾಲ್ತಿಯಲ್ಲಿರುವ ಮಾರ್ಗದರ್ಶಿಗಳನ್ನು ಸರಳೀಕರಣಗೊಳಿಸಲು ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

(ಅ) ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ (NRDWP)ದಡಿ 40 LPCDಗಿಂತ ಕಡಿಮೆ ನೀರು ಪೂರೈಕೆಯಿರುವ ಮತ್ತು ನೀರಿನ ಗುಣಮಟ್ಟದ ಸಮಸ್ಯೆಯಿರುವ ಎಲ್ಲಾ ಸಮಸ್ಯಾತ್ಮಕ ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳನ್ನು ಅಳವಡಿಸಬಹುದು. ಒಂದು ವೇಳೆ ಅಂತಿಮಗೊಳಿಸಿರುವ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಗಳು ಸೇರ್ಪಡೆಯಾಗದಿದ್ದಲ್ಲಿ, ಹಾಗೂ ಈಗ ಸೇರ್ಪಡೆ ಮಾಡಲು ಅರ್ಹತೆ ಇದ್ದಲ್ಲಿ ತಕ್ಷಣ ಟಾಸ್ಕ್ ಫೋರ್ಸ್ ಸಮಿತಿ ನಿರ್ಣಯಗಳನ್ವಯ CE/PRED ಅನುಮತಿ ಪಡೆದು **2013-14**ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡಿ ಕಾರ್ಯಗತಗೊಳಿಸುವುದು.

(ಆ) ಒಂದು ವೇಳೆ NRDWP ಅಡಿ ಅಳವಡಿಸಲು ಅರ್ಹತೆ ಅಥವಾ ಅವಕಾಶ ಇಲ್ಲದೇ ಇದ್ದಲ್ಲಿ ಹಾಗೂ ಅಂತರ್ಜಲ ಕುಸಿತದಿಂದ ತಕ್ಷಣ ಪರ್ಯಾಯ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿ ಅವಶ್ಯಕತೆಯಿದ್ದಲ್ಲಿ, ಟಾಸ್ಕ್ ಫೋರ್ಸ್ ಸಮಿತಿ ನಿರ್ಣಯಗಳನ್ವಯ ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ State Disaster Response Fund / National Disaster Response Fund (SDRF/NDRF)ಅಡಿ ವೆಚ್ಚ ಭರಿಸಲು ಕ್ರಮವಹಿಸಬೇಕು.

(ಇ) ಮೇಲೆ (ಅ) ಮತ್ತು (ಆ)ರಲ್ಲಿ ಹೇಳಲಾದ ವ್ಯವಸ್ಥೆಯಡಿ ಉದ್ದೇಶಿತ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದೇ ಇದ್ದಲ್ಲಿ ಮಾತ್ರ ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ, ಸ್ಥಳೀಯ ಅಗತ್ಯತೆ ಆಧರಿಸಿ, ಟಾಸ್ಕ್ ಫೋರ್ಸ್ ಸಮಿತಿಗಳ ನಿರ್ಣಯದ ಆಧಾರದ ಮೇಲೆ **ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಬಿಡುಗಡೆಯಾದ ವಿಶೇಷ ರಾಜ್ಯವಲಯ ಅನುದಾನದಡಿ** ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಕಾಮಗಾರಿಗಳನ್ನು ಕೈಗೊಳ್ಳಬಹುದು. **ಇಂತಹ ಕೊಳವೆಬಾವಿಗಳಿಗೆ ಅಗತ್ಯವಿರುವ ಪೈಪ್‌ಲೈನ್ ಇತ್ಯಾದಿ ಕಾಮಗಾರಿಗಳನ್ನು SDRF/NDRFನಡಿ ಅವಕಾಶದಂತೆ ತೆಗೆದುಕೊಳ್ಳುವುದು.** ಇಂತಹ ಕೊಳವೆಬಾವಿಗಳಿಗೆ ಪೈಪ್‌ಲೈನ್ ಇತ್ಯಾದಿ ಕಾಮಗಾರಿಗಳನ್ನು **SDRF/NDRFನಡಿ ತೆಗೆದುಕೊಳ್ಳಲು ಅನುದಾನ ಲಭ್ಯವಿಲ್ಲವೆಂದು ಜಿಲ್ಲಾಧಿಕಾರಿಗಳು ಹಿಂಬರಹ ನೀಡಿದಲ್ಲಿ, ಅಂತಹ ಪ್ರಕರಣಗಳಲ್ಲಿ ಮಾತ್ರ, ವಿಶೇಷ ಅನುದಾನ ಅಡಿಯಲ್ಲೇ ವಿದ್ಯುದ್ಧೀಕರಣ ಬಾಬ್ತು ಸೇರಿದಂತೆ ಸಂಪೂರ್ಣ ವೆಚ್ಚ ಭರಿಸಲು ಅನುಮತಿ ನೀಡಿದೆ. ಸದರಿ ಕಾಮಗಾರಿಗಳನ್ನು ಜಾಗ್ರತೆಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತ್ ಮಟ್ಟದಲ್ಲಿಯೇ ಕ್ರಮಕೈಗೊಳ್ಳಬಹುದು. ತದನಂತರ ವಿಳಂಬವಿಲ್ಲದೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರಕ್ಕೆ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯ ಚಿತ್ರಣದೊಂದಿಗೆ ಹೆಚ್ಚುವರಿ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಕಳುಹಿಸಬೇಕು.**

...3

(ಈ) ಈಗಾಗಲೇ ರಾಜ್ಯ ಮತ್ತು ಕೇಂದ್ರವಲಯಗಳಡಿ ಜಿಲ್ಲಾ ಪಂಚಾಯಿತಿಗಳಿಗೆ NRDWP ಅಡಿ **2013–14ರ** ಸಾಲಿಗೆ ಲಭ್ಯವಾಗಿರುವ ಅನುದಾನ **ರೂ.637.66ಕೋಟಿ.** ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಬಿಡುಗಡೆ **ಮಾಡಲಾದ ವಿಶೇಷ ಅನುದಾನ ರೂ.51.50ಕೋಟಿಗಳಲ್ಲಿ ರೂ.7.98ಕೋಟಿ** ಮಾತ್ರ ಖರ್ಚಾಗಿರುವ ಮಾಹಿತಿ ಒದಗಿಸಲಾಗಿದೆ. ಒಟ್ಟಾರೆ **ರೂ.689.16ಕೋಟಿ** ಪೈಕಿ ವೆಚ್ಚವಾಗಿರುವ **ರೂ.173.00ಕೋಟಿಯ** ಜಿಲ್ಲಾವಾರು ಚಿತ್ರಣವನ್ನು ಸಹ ಸಿದ್ಧ ಮಾಹಿತಿಗಾಗಿ ಅಡಕ ಮಾಡಿದೆ. ಅಂತೆಯೇ, ಮೊದಲು ಲಭ್ಯವಿರುವ ಅನುದಾನವನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಂಡು ನಂತರ ವಾಸ್ತವಿಕವಾಗಿ ಅಗತ್ಯವಿರುವ ಹೆಚ್ಚುವರಿ ಅನುದಾನದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಬೇಕು.

5. ಮೇಲ್ಕಂಡ ಹಿನ್ನೆಲೆಯಲ್ಲಿ, ಜಿಲ್ಲಾ ಪಂಚಾಯಿತಿಗಳು ತಕ್ಷಣ ಗ್ರಾಮೀಣ ಪ್ರದೇಶಗಳಲ್ಲಿ ಟಾಸ್ಕ್ ಫೋರ್ಸ್ ಸಮಿತಿ ನಿರ್ಣಯಗಳ ಪ್ರಕಾರ ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನವನ್ನು ತೀವ್ರಗೊಳಿಸಿ, **ಪ್ರತಿ ತಿಂಗಳು 10ನೇ ತಾರೀಖಿನಂದು ಜಿಲ್ಲಾಮಟ್ಟದಲ್ಲಿ** ವಸ್ತುಸ್ಥಿತಿ ಪರಿವೀಕ್ಷಣೆ ಮಾಡಿ ಈ ಸುತ್ತೋಲೆಗೆ ಲಗತ್ತಿಸಿರುವ ಪ್ರಪತ್ರದಲ್ಲಿ ಸರ್ಕಾರಕ್ಕೆ ವರದಿ ನೀಡಲು ಕೋರಿದೆ. **ಈ ಸಂಬಂಧ ಜಿಲ್ಲಾ ಮಟ್ಟದಲ್ಲಿ ಪ್ರತಿ ಮಾಹೆ ನಡೆಸುವ ಸಭಾ ನಡವಳಿಗಳನ್ನು ಮಾನ್ಯ ಗ್ರಾ.ಅಪಂ.ರಾಜ್ ಸಚಿವರ ಕಾರ್ಯಾಲಯಕ್ಕೆ ತಪ್ಪದೇ ಸಲ್ಲಿಸಬೇಕೆಂದು ತಿಳಿಸಿದೆ.**

19/7/13

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
**ಇಮೇಲ್: rk3452000@gmail.com**
**(ಫೋನ್ ನಂ:22032806, ಫ್ಯಾಕ್ಸ್: ನಂ:22203175)**

ಇವರಿಗೆ:

1. ರಾಜ್ಯ ಎಲ್ಲಾ(30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ನಂ.55, 4ನೇ ಮಹಡಿ, ಅಭಯ ಸಂಕೀರ್ಣ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–20. ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
3. ರಾಜ್ಯದ ಎಲ್ಲಾ(8) ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವೃತ್ತಗಳು.
4. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗಗಳು, ಮತ್ತು
5. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಂಬಂಧಿಸಿದ ತಾಲ್ಲೂಕು ಕಾರ್ಯಪಡೆ ಅಧ್ಯಕ್ಷರು ಹಾಗೂ ರಾಜ್ಯದ ಎಲ್ಲಾ ಗ್ರಾಮೀಣ ಕ್ಷೇತ್ರಗಳ ಮಾನ್ಯ ಶಾಸಕರುಗಳ ದಯಾಪರ ಅವಗಾಹನೆಗೆ ಈ ಸುತ್ತೋಲೆಯ ಪ್ರತಿಯನ್ನು ಖುದ್ದಾಗಿ ನೀಡಿ ಟಾಸ್ಕ್ ಫೋರ್ಸ್ ಸಮಿತಿಗಳ ವ್ಯಾಪ್ತಿ ಮತ್ತು ಚಟುವಟಿಕೆಗಳ ವಿಚಾರದಲ್ಲಿ ಮನವರಿಕೆ ಮಾಡಲು ಕೋರಿದೆ.
6. ರಾಜ್ಯದ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್‌ಗಳಿಗೆ / ಎಲ್ಲಾ ESCOMಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಹಾಗೂ ಗ್ರಾಅಪ. ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳು/ ಆಪ್ತ ಸಹಾಯಕರುಗಳು.
4. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, (DMC) ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಅಪರ ನಿರ್ದೇಶಕರು /ಆರ್ಥಿಕ / ಕಾರ್ಯಚರಣೆ, SWSM ಕಾವೇರಿ ಭವನ, ಬೆಂಗಳೂರು–9.
7. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.

# STATEMENT SHOWING THE FUND FLOW UNDER NRDWP (RWS SECTOR) CENTRAL , STATE & SPECIAL GRANTS -2013-14

(Rs. in Lakhs)

| Sl. No | District | NRDWP Central OB+Rel | NRDWP State OB+Rel | Total Funds Available under NRDWP | Exp from NRDWP | Special Grant Released to Task Force Committees for Emergent Works | Exp from Special Grant |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | Bagalkote | 2861.47 | 719.90 | 3581.37 | 564.23 | 100.00 | 0.00 |
| 2 | Bangalore (R) | 769.14 | 658.84 | 1427.98 | 844.28 | 200.00 | 0.00 |
| 3 | Bangalore (U) | 758.41 | 679.37 | 1437.78 | 233.75 | 200.00 | 86.66 |
| 4 | Belgaum | 1551.44 | 1159.35 | 2710.79 | 1122.60 | 300.00 | 0.00 |
| 5 | Bellary | 2846.13 | 860.15 | 3706.28 | 699.88 | 200.00 | 0.00 |
| 6 | Bidar | 913.23 | 1019.25 | 1932.48 | 218.57 | 200.00 | 80.60 |
| 7 | Bijapura | 2603.92 | 974.75 | 3578.67 | 446.09 | 200.00 | 100.00 |
| 8 | Chamarajanagara | 660.40 | 857.20 | 1517.60 | 405.33 | 200.00 | 0.00 |
| 9 | Chickkaballapura | 970.65 | 852.65 | 1823.30 | 549.20 | 200.00 | 66.80 |
| 10 | Chickmagalore | 814.18 | 751.90 | 1566.08 | 414.88 | 200.00 | 66.31 |
| 11 | Chitradurga | 1544.58 | 902.58 | 2447.16 | 778.48 | 100.00 | 0.00 |
| 12 | Dakshina Kannada | 975.54 | 650.00 | 1625.54 | 450.65 | 100.00 | 7.57 |
| 13 | Davanagere | 1552.80 | 796.71 | 2349.51 | 173.94 | 300.00 | 63.85 |
| 14 | Dharwad | 575.45 | 716.75 | 1292.20 | 465.10 | 100.00 | 0.00 |
| 15 | Gadag | 824.60 | 744.05 | 1568.65 | 653.54 | 100.00 | 0.00 |
| 16 | Gulbarga | 1050.87 | 1385.06 | 2435.93 | 536.96 | 100.00 | 0.00 |
| 17 | Hassan | 837.56 | 792.66 | 1630.22 | 723.60 | 200.00 | 0.00 |
| 18 | Haveri | 858.27 | 810.80 | 1669.07 | 537.50 | 100.00 | 47.00 |
| 19 | Kodagu | 396.76 | 578.32 | 975.08 | 56.29 | 100.00 | 0.00 |
| 20 | Kolar | 1142.87 | 823.43 | 1966.30 | 565.24 | 250.00 | 0.00 |
| 21 | Koppal | 2611.73 | 960.15 | 3571.88 | 843.90 | 100.00 | 0.00 |
| 22 | Mandya | 1217.95 | 874.19 | 2092.14 | 862.70 | 100.00 | 27.36 |
| 23 | Mysore | 1160.62 | 911.55 | 2072.17 | 395.06 | 200.00 | 9.47 |
| 24 | Raichur | 2354.37 | 1115.23 | 3469.60 | 401.38 | 100.00 | 0.00 |
| 25 | Ramanagaram | 872.78 | 802.72 | 1675.50 | 470.09 | 100.00 | 0.00 |
| 26 | Shimoga | 846.55 | 726.36 | 1572.91 | 772.77 | 200.00 | 0.00 |
| 27 | Tumkur | 1623.46 | 1369.86 | 2993.32 | 537.18 | 400.00 | 116.40 |
| 28 | Udupi | 685.60 | 650.00 | 1335.60 | 1507.17 | 100.00 | 26.00 |
| 29 | Uttara Kannada | 1035.21 | 774.39 | 1809.60 | 130.41 | 200.00 | 0.00 |
| 30 | Yadgir | 656.47 | 960.15 | 1616.62 | 142.20 | 200.00 | 100.00 |
| State Head Quaretrs | | 314.97 | 0.00 | 314.97 | 0.00 | 0.00 | 0.00 |
| Total | | 37887.95 | 25878.32 | 63766.27 | 16502.98 | 5150.00 | 798.02 |

## 2013–14ನೇ ಸಾಲಿನ ತುರ್ತು ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ ಬಾಬ್ತಿನ ಜಿಲ್ಲಾವಾರು ವಿವರಗಳ ತಃಖ್ತೆ (ರೂ.ಲಕ್ಷಗಳಲ್ಲಿ)

| ಕ್ರಸ | ಜಿಲ್ಲೆ | ತುರ್ತು ಗ್ರಾನೀಸ ಕಾಮಗಾರಿಗಳ ಬಾಬ್ತಿನ ಒಟ್ಟು ಬೇಡಿಕೆ | | ಕಲಂ: 3ರ ಪೈಕಿ 2013–14ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ಅಳವಡಿಸಿರುವ | | 2013–14ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ರೂ.51.50ಕೋಟಿ ಅನುದಾನದಡಿ ಜಿಲ್ಲಾವಾರು | | | | | | | ಬಾಕಿ ಬೇಡಿಕೆ ಮೊತ್ತ | |
|---|---|---|---|---|---|---|---|---|---|---|---|---|---|---|
| | | ಕಾಮಗಾರಿಗಳ ಸಂಖ್ಯೆ | ಅನುದಾನ | ಕಾಮಗಾರಿಗಳ ಸಂಖ್ಯೆ | ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ | ಸದರಿ ಅನುದಾನದಡಿ ಕೊರೆದಿರುವ ಬೋರ್‌ವೆಲ್‌ಗಳ ಒಟ್ಟು ಸಂಖ್ಯೆ | ಸಫಲವಾಗಿರುವ ಬೋರ್‌ವೆಲ್‌ಗಳ ಸಂಖ್ಯೆ | ವಿಫಲವಾಗಿರುವ ಬೋರ್‌ವೆಲ್‌ಗಳ ಸಂಖ್ಯೆ | ಕಲಂ: 10ರ ಪೈಕಿ SDRF / NDRF ಅನುದಾನದಡಿಯಲ್ಲಿ ಕಾರ್ಯಗತಗೊಳಿಸಿರುವ ಕಾಮಗಾರಿಗಳ | | ಯಾವುದೇ ಕ್ರಿಯಾ ಯೋಜನೆಯಡಿ ಸೇರ್ಪಡೆಯಾಗದೆ ಯಿರುವ ಕಾಮಗಾರಿಗಳ ಸಂಖ್ಯೆ | ಅನುದಾನ ಬೇಡಿಕೆ |
| | | | | | | | | | | | ಸಂಖ್ಯೆ | ವೆಚ್ಚ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 1 | ಬಾಗಲಕೋಟೆ | - | - | - | - | 100.00 | | | | | | | | |
| 2 | ಬೆಂಗಳೂರು(ಗ್ರಾ) | 1074 | 4154.00 | 1025 | 4054.00 | 200.00 | | | | | | | | |
| 3 | ಬೆಂಗಳೂರು(ನ) | 1301 | 6883.80 | 1001 | 5348.59 | 200.00 | | | | | | | | |
| 4 | ಬೆಳಗಾಂ | 4731 | 18663.06 | 4237 | 16815.06 | 300.00 | | | | | | | | |
| 5 | ಬಳ್ಳಾರಿ | 1425 | 9370.57 | 1118 | 8289.64 | 200.00 | | | | | | | | |
| 6 | ಬೀದರ್ | 1673 | 6057.63 | 1458 | 5829.63 | 200.00 | | | | | | | | |
| 7 | ವಿಜಾಪುರ | 1023 | 7147.90 | 738 | 6797.90 | 200.00 | | | | | | | | |
| 8 | ಚಾಮರಾಜನಗರ | 2304 | 8368.82 | 1717 | 5968.82 | 200.00 | | | | | | | | |
| 9 | ಚಿಕ್ಕಬಳ್ಳಾಪುರ | 1093 | 3877.66 | 929 | 3463.00 | 200.00 | | | | | | | | |
| 10 | ಚಿಕ್ಕಮಗಳೂರು | - | - | - | - | 200.00 | | | | | | | | |
| 11 | ಚಿತ್ರದುರ್ಗ | 2187 | 8259.76 | 1379 | 6181.79 | 100.00 | | | | | | | | |
| 12 | ದಕ್ಷಿಣ ಕನ್ನಡ | 1349 | 3125.03 | 1055 | 2875.03 | 100.00 | | | | | | | | |
| 13 | ದಾವಣಗೆರೆ | 2105 | 11543.90 | 1569 | 9398.07 | 300.00 | | | | | | | | |
| 14 | ಧಾರವಾಡ | 874 | 4082.84 | 794 | 3912.84 | 100.00 | | | | | | | | |
| 15 | ಗದಗ | 1464 | 7750.09 | 1464 | 7750.09 | 100.00 | | | | | | | | |
| 16 | ಗುಲ್ಬರ್ಗಾ | 1207 | 7245.00 | 839 | 6744.61 | 100.00 | | | | | | | | |
| 17 | ಹಾಸನ | 3168 | 9330.51 | 1997 | 5491.72 | 200.00 | | | | | | | | |
| 18 | ಹಾವೇರಿ | 645 | 1529.00 | 235 | 564.79 | 100.00 | | | | | | | | |
| 19 | ಕೊಡಗು | 626 | 2780.00 | 537 | 2680.00 | 100.00 | | | | | | | | |
| 20 | ಕೋಲಾರ | 2994 | 10279.27 | 2923 | 9979.37 | 250.00 | | | | | | | | |
| 21 | ಕೊಪ್ಪಳ | 1852 | 11475.36 | 1580 | 8685.83 | 100.00 | | | | | | | | |
| 22 | ಮಂಡ್ಯ | 3969 | 10899.64 | 2984 | 10099.64 | 100.00 | | | | | | | | |
| 23 | ಮೈಸೂರು | - | - | - | - | 200.00 | | | | | | | | |
| 24 | ರಾಯಚೂರು | 1847 | 9786.95 | 1847 | 9786.95 | 100.00 | | | | | | | | |
| 25 | ರಾಮನಗರ | 1874 | 7668.50 | 1468 | 5980.00 | 100.00 | | | | | | | | |
| 26 | ಶಿವಮೊಗ್ಗ | 2004 | 5718.32 | 1638 | 4929.32 | 200.00 | | | | | | | | |
| 27 | ತುಮಕೂರು | 5734 | 24698.68 | 3962 | 20855.39 | 400.00 | | | | | | | | |
| 28 | ಉಡುಪಿ | 1441 | 3952.88 | 1358 | 3926.09 | 100.00 | | | | | | | | |
| 29 | ಉತ್ತರ ಕನ್ನಡ | 2250 | 7397.71 | 1925 | 7290.39 | 200.00 | | | | | | | | |
| 30 | ಯಾದಗಿರಿ | 592 | 3010.00 | 293 | 2260.00 | 200.00 | | | | | | | | |
| | ಒಟ್ಟು | 52806 | 215056.88 | 42070 | 185958.56 | 5150.00 | | | | | | | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
________ಜಿಲ್ಲಾ ಪಂಚಾಯತ್

ಮುಖ್ಯ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು